ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದ ಕ್ರಮವೇನು,

ಉ) ಅತಿಕ್ರಮಣ ಮಾಡಿದ ಜಮೀನನ್ನು ಸರ್ಕಾರಿ ವಶಕ್ಕೆ ಪಡೆದು ಅದನ್ನು ಹರಾಜು ಮಾಡಿ ಬಂದ ಹಣದಿಂದ ವಸತಿ ಹೀನ ಗ್ರಾಮಸ್ಥರ ಅಭಿವೃದ್ಧಿಪಡಿಸಲಾಗುವುದೆಂದು ಸರ್ಕಾರ ಗುರಿ ಹೊಂದಿದೆಯೆಂದು ಘೋಷಿಸಿರುವುದು ನಿಜವಲ್ಲವೇ

ಊ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಕೃಷಿ ಇಲಾಖೆಯ ವತಿಯಿಂದ ಇಂತಹ ಯಾವುದೇ ಘೋಷಣೆಯನ್ನು ಮಾಡಿಲ್ಲದಿರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1290(1309)**

ಸದಸ್ಯರ ಹೆಸರು **ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ [ಸೇಡಂ]**

ಉತ್ತರಿಸಬೇಕಾದ ಸಚಿವರು **ಶ್ರೀ ಹೆಚ್ ಕೆ ಕುಮಾರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)**

1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅರಕಾಲಿಕ–ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವವರೆಷ್ಟು [ಜಿಲ್ಲಾವಾರು ಮಾಹಿತಿ ನೀಡುವುದು],

ಇಲಾಖೆಯ ಬಾಲ ಸೇವಾ ಸಂಸ್ಥೆಗಳಲ್ಲಿ ಅರೆಕಾಲಿಕ–ದೈಹಿಕ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ,

1 ಮೈಸೂರು	4	
2 ದಾವಣಗೆರೆ	2	
3 ಬೆಳಗಾವಿ	–	
4 ರಾಯಚೂರು	–	
5 ಧಾರವಾಡ	4	
6 ಗುಲ್ಬರ್ಗ	4	
7 ಕೋಲಾರ	1	
8 ಶಿವಮೊಗ್ಗ	1	
9 ಬೆಂಗಳೂರು	7	
ಒಟ್ಟು	23	

2) ಎಷ್ಟು ವರ್ಷಗಳಿಂದ ಅವರು ಕೆಲಸ ನಿರ್ವಹಿಸುತ್ತಿದ್ದಾರೆ ಹಾಗೂ ಇವರಿಗೆ ಪ್ರತಿ ತಿಂಗಳು ನೀಡುತ್ತಿರುವ ಸಂಬಳವೆಷ್ಟು,

20 ವರ್ಷಗಳಿಂದ ದಿನಕ್ಕೆ 2 ಗಂಟೆಗಳ ಕಾಲ ಅರೆಕಾಲಿಕ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ತಲಾ ಪ್ರತಿ ಮಾಹೆಗೆ ರೂ 350/–ಗಳಂತೆ ಗೌರವಧನ ಪಾವತಿಸಲಾಗುತ್ತಿದೆ

3) ಈ ಶಿಕ್ಷಕರಿಗೆ ಕನಿಷ್ಠ ವೇತನ ಕಾಯ್ದೆಯಡಿ ವೇತನ ನಿಗಧಿಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ,

ಪರಿಶೀಲನೆಯಲ್ಲಿದೆ

4) ಅರಕಾಲಿಕ ಶಿಕ್ಷಕರ ಸೇವೆಯನ್ನು ಪೂರ್ಣಾವಧಿಯೆಂದು ಪರಿಗಣಿಸಿ ಸಂಬಳ ನಿಗದಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು?

ಅಂತಹ ಪ್ರಸ್ತಾವನೆ ಪರಿಶೀಲನೆಯಲ್ಲಿರುವುದಿಲ್ಲ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1291(1344)**
ಸದಸ್ಯರ ಹೆಸರು **ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್**
(ಸೇಡಂ)
ಉತ್ತರಿಸಬೇಕಾದ ಸಚಿವರು **ಶ್ರೀ ಬಿ ನಾಗರಾಜ ಶೆಟ್ಟಿ**
(ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು)

a) The funds allocated to worship places under Muzrai, Templewise allocation of funds in the State be furnished)

2006–07ನೇ ಸಾಲಿನಲ್ಲಿ 1652 ದೇವಸ್ಥಾನಗಳಿಗೆ ರೂ 807 05 ಲಕ್ಷಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗಿದೆ (ಪಟ್ಟಿ ಲಗತ್ತಿಸಿದೆ)

b) Is there any proposal before the Government for the improvements of temples of Sedam Taluk,

c) If so, the action taken by the Government?

ಪ್ರಸ್ತುತ ಸಾಲಿನಲ್ಲಿ ಸೇಡಂ ತಾಲ್ಲೂಕಿನ ದೇವಾಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ ಸೇಡಂ ತಾಲ್ಲೂಕಿನ ದೇವಾಲಯಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಗುಲ್ಬರ್ಗಾ ಜಿಲ್ಲಾಧಿಕಾರಿಗಳಿಂದ ಸಹ ಯಾವುದೇ ಪ್ರಸ್ತಾವನೆಗಳು ಬಂದಿರುವುದಿಲ್ಲ ಪ್ರಶ್ನೆ ಉದ್ಭವಿಸುವುದಿಲ್ಲ